ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2021–22** **ದಿನಾಂಕ : 09–11–2021**

# ಮಾಧ್ಯಮ ಆಮಂತ್ರಣ

# MEDIA INVITATION

**1.** ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ಕುರಿತು ಪತ್ರಿಕಾಗೋಷ್ಠಿ

ವಿ.ಸೋಮಣ್ಣ,
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ : 10–11–2021 ಸೋಮವಾರ, ಸಮಯ: ಮಧ್ಯಾಹ್ನ 1.00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ : 313, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.

2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆಆರ್ ಇ ಡಿಎಲ್) - ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ: 2021-26 ಕರಡು ಕುರಿತ ಪಾಲುದಾರರ ಸಮಾಲೋಚನಾ ಸಭೆ

ಉದ್ಘಾಟನಾ ಭಾಷಣ :
ವಿ.ಸುನಿಲ್ ಕುಮಾರ್,
ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ: 10-11-2021, ಬುಧವಾರ ಸಮಯ : ಸಂಜೆ 6.30 ಗಂಟೆಗೆ,

ಸ್ಥಳ : ಹೋಟೆಲ್ ಶಾಂಗ್ರೀಲಾ, ವಸಂತನಗರ, ಬೆಂಗಳೂರು

**KARNATAKA RENEWABLE ENERGY DEVELOPMENT LTD (KREDL) - Stakeholders consultation meeting on the proposed _Draft Karnataka Renewable Energy Policy - 2021-26**

Inaugural address by:

V. Sunil Kumar,
Hon’ble Energy Minister, Govt. of Karnataka
Date: 10-11-2021 Wednessday, Time: Evening 6.30 PM

Venue: Hotel Shangri-La, Vasanth Nagar, Bengaluru

# ಪತ್ರಿಕಾ ಪ್ರಕಟಣೆ

**PRESS RELEASE**

## ರಾಷ್ಟ್ರೀಯ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಡಾ.ಎಂ.ಸೂರ್ಯ ಪ್ರಸಾದ್

ಬೆಂಗಳೂರು, ನವೆಂಬರ್ 09 (ಕರ್ನಾಟಕ ವಾರ್ತೆ) :

ಅಂತರಾಷ್ಟ್ರೀಯ ಖ್ಯಾತಿಯ ಸಂಗೀತ ತಜ್ಞ ಕಲಾ ವಿಮರ್ಶಕ ಮತ್ತು ಅಂಕಣಕಾರ ಡಾ.ಎಂ.ಸೂರ್ಯ ಪ್ರಸಾದ್ ಅವರನ್ನು ಡಿಸೆಂಬರ್ 5 ರಿಂದ ಡಿಸೆಂಬರ್ 12ರ ವರೆಗೆ ನಡೆಯಲಿರುವ 116 ವರ್ಷದ ಬೆಂಗಳೂರು ಗಾಯನ ಸಮಾಜದ 51ನೇ ರಾಷ್ಟ್ರೀಯ ಸಂಗೀತ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ರಾಷ್ಟ್ರೀಯ ಸಮ್ಮೇಳನಾಧ್ಯಕ್ಷ ಡಾ.ಎಂ.ಸೂರ್ಯ ಪ್ರಸಾದ್ ಅವರಿಗೆ ಡಿಸೆಂಬರ್ 12 ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ " ಸಂಗೀತ ಕಲಾ ರತ್ನ " ಬಿರುದು 50 ಸಾವಿರ ರೂಪಾಯಿ ನಗದು ನೀಡಿ ಸನ್ಮಾನಿಸಲಾಗುವುದು. ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವ ಕೃಷ್ಣಾರೆಡ್ಡಿ, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ ಸಚಿವ ಆರ್. ಅಶೋಕ್, ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ. ಸುನೀಲ್ ಕುಮಾರ್, ಸಂಸ್ಕಾರ ಭಾರತೀಯ ಸಂಘಟನಾ ಕಾರ್ಯದರ್ಶಿ ಪ.ರಾ.ಕೃಷ್ಣಮೂರ್ತಿ, ಪ್ರಜಾವಾಣಿ ಪತ್ರಿಕೆಯ ಕೆ. ಶಾಂತಕುಮಾರ್, ಸುಪರಿಚಿತ ಶ್ರೀಯದುಗಿರಿ ಯತಿರಾಜ ರಾಮಾನುಜ ನಾರಾಯಣ ಜೀಯರ್ ಸ್ವಾಮೀಜಿ, ತುಮಕೂರಿನ ಶ್ರೀ ರಾಮಕೃಷ್ಣ ವ್ಮಠದ ಶೀ ವೀರೇಶಾಣಂದ ಸ್ವಾಮೀಜಿ ಮುಂತಾದವರು ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನವೆಂಬರ್ 11ರಿಂದ 14 ವರೆಗೆ ಯು.ಎ.ಎಸ್.ಬಿ ಕೃಷಿ ಮೇಳ – 2021 ಆಯೋಜನೆ

**ಬೆಂಗಳೂರು, ನವೆಂಬರ್ 09, (ಕರ್ನಾಟಕ ವಾರ್ತೆ) :**

ಕೃಷಿ ವಿಶ್ವವಿದ್ಯಾನಿಲಯದ ನೂತನ ತಂತ್ರಜ್ಞಾನಗಳು ಮತ್ತು ಕೃಷಿಯಲ್ಲಿ ನೂತನ ಅವಿಷ್ಕಾರಗಳು ರೈತರಿಗೆ ಸಕಾಲದಲ್ಲಿ ತಲುಪುವಂತಾಗಲು ಈ ವರ್ಷದ ಕೃಷಿ ಮೇಳವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕೃಷಿ ಮೇಳವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 2021ರ ನವೆಂಬರ್, 11, 12, 13 ಮತ್ತು 14 ರಂದು ನಾಲ್ಕು ದಿನಗಳ ಕಾಲ ಆಯೋಜಿಸಲು ನಿರ್ಧರಿಸಲಾಗಿದೆ. ಎಂದು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದರು.

ಇಂದು ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ) ಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಕುಲಪತಿಗಳು ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಹೊಸ ತಾಂತ್ರಿಕತೆಗಳನ್ನು ಬಳಸಿಕೊಳ್ಳುವುದರ ಬಗ್ಗೆ ರೈತರಿಗೆ ಈ ಕೃಷಿಮೇಳದಲ್ಲಿ ಮಾಹಿತಿ ಒದಗಿಸಲಾಗುವುದು. ಭತ್ತ, ರಾಗಿ, ಬರಗು, ನವಣೆ, ಕಬ್ಬು, ಹಲಸು, ಮೇವಿನ ತೋಕೆ ಗೋದಿ ಸಾಮೆ ಮುಂತಾದ ಹೊಸ ತಳಿಗಳನ್ನು ಪರಿಚಯಿಸಲಾಗುವುದು. ಈ ಕೃಷಿ ಮೇಳದಲ್ಲಿ ಹತ್ತು ಹೊಸ ತಳಿಗಳು ಮತ್ತು 28 ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಲಾಗುವುದು. ಕೃಷಿ ಸಾಧಕರಿಗೆ ಪುರಸ್ಕಾರ, ಎಂದು ತಿಳಿಸಿದರು.

ಕೃಷಿ ಮೇಳ ಕುರಿತಂತೆ ಅಂಗೈಯಲ್ಲೇ ಕೃಷಿ ಮೇಳ, ವೆಬ್ ಪೇಜ್, ವೆಬ್‌ಸೈಟ್, ಯೂಟ್ಯೂಬ್, ಟ್ವಿಟ್ಟರ್, ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮತ್ತು ಜೂಮ್ ಸಭೆ ಮೂಲಕ ನೇರ ಪ್ರಸಾರ ಮಾಡುವುದು ರೈತರಿಗೆ ಕೃಷಿ ಸಮಸ್ಯೆಗಳ ಬಗ್ಗೆ ಕುಳಿತಲ್ಲಿಯೇ ಪರಿಹಾರವನ್ನು ನೀಡಲಾಗುವುದು.

ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆ, ತೋಟಗಾರಿಕೆ ಬೆಳೆಗಳ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ, ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಸಿರಿಧಾನ್ಯಗಳು ಹಾಗೂ ಮಹತ್ವ, ಔಷಧೀಯ ಮತ್ತು ಸುಗಂಧದ್ರವ್ಯ ಸಸ್ಯಗಳು, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿಗಳು, ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ, ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ, ರೈತರ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳು, ಮಳೆ ಹಾಗೂ ಮೇಲ್ಬಾವಣಿ ನೀರಿನ ಕೋಯ್ಲು, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಕೊಯ್ಲಿನೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ, ಪಸುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಹಾಗೂ ಮೀನು ಸಾಕಣೆ, ಮಾರುಕಟ್ಟೆ ನೈಪುಣ್ಯತೆ ಮಾಹಿತಿ, ಹವಾಮಾನ ಚತುರ ಕೃಷಿ, ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ, ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನ, ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿ, ಕೃಷಿ ಪರಿಕರಗಳ ಹಾಗೂ ಪ್ರಕಟಣೆಗಳ ಮಾರಾಟ ವ್ಯವಸ್ಥೆ ಕುರಿತಾದ ಕೃಷಿ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷಿಯನ್ನು ನೀಡಲಾಗುವುದು. ಇದರಿಂದ ರೈತರಿಗೆ ಬಹಳ ಅನುಕೂಲವಾಗಲಿದೆ ಎಂದು ತಿಳಿಸಿದರು.

ರಾಜ್ಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿರುವಂತಹ ರೈತರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು. ಅದರಂತೆ ರಾಜ್ಯಮಟ್ಟದ ಪ್ರಶಸ್ತಿಗಳಾದ ಮಾಜಿ ಪ್ರಧಾನಮಂತ್ರಿ ಶ್ರೀ ಹೆಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆಯ ಎಂ.ಸಿ. ರಂಗಸ್ವಾಮಿ, ಡಾ॥ ಎಂ.ಹೆಚ್.ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡ ತುಮಕೂರಿನ ಟಿ.ಎಂ. ಅರವಿಂದ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಹಾಸನ ಜಿಲ್ಲೆ ಆಲೂರು ತಾಲ್ಲೂಕು ಯಡೂರಿನ ಕುಮಾರಿ ವೈ.ಜಿ. ಮಂಜುಳ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಲಕ್ಷ್ಮೀದೇವಿಪುರದ ಸಿ. ನವಿಕ್ರಮ್, ಡಾ॥ ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿಗೆ ಕೋಲಾರ ತಾಲ್ಲೂಕಿನ ಅರಿನಾಗನಹಳ್ಳಿಯ ಮುನಿರೆಡ್ಡಿ, ಡಾ॥ ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಎ.ಪಿ. ಮಲ್ಲಿಕಾರ್ಜುನಗೌಡ, ಡಾ: ಎಂ.ಹೆಚ್. ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ. ಹೆಚ್.ಪಿ.ಮಹೇಶ್ವರಪ್ಪ ಅವರು ಅರ್ಹರಾಗಿದ್ದು, ಈ ಕೃಷಿ ಮೇಳದಲ್ಲಿ ಇವರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು.

ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿ; ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 10 ಜಿಲ್ಲೆಗಳಲ್ಲಿ ಪ್ರಗತಿಪರ ರೈತ ಪ್ರಶಸ್ತಿ ಮತ್ತು ಪ್ರಗತಿಪರ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿ ಪರ ರೈತ ಮತ್ತು ರೈತ ಮಹಿಳೆಯರಿಗೆ ನೀಡಲಾಗುವುದು.

ತಾಲ್ಲೂಕು ಮಟ್ಟದ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಯುವ ರೈತ ಮಹಿಳಾ ಪ್ರಶಸ್ತಿ; ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ 61 ತಾಲ್ಲೂಕುಗಳಲ್ಲಿ ಪ್ರಗತಿಪರ ಯುವ ರೈತ ಪ್ರಶಸ್ತಿ ಮತ್ತು ಪ್ರಗತಿಪರ ಯುವ ರೈತ ಮಹಿಳಾ ಪ್ರಶಸ್ತಿಗಳನ್ನು ಅರ್ಹ ಪ್ರಗತಿಪರ ಯುವ ರೈತ ಮತ್ತು ಪ್ರಗತಿಪರ ಯುವ ರೈತ ಮಹಿಳೆಯರಿಗೆ ನೀಡಲಾಗುವುದು. ಅಭ್ಯರ್ಥಿಗಳ ವಯಸ್ಸು 35 ವರ್ಷ ಮೀರಿರಬಾರದು. ಎಂದು ತಿಳಿಸಿದರು.

ಅಲ್ಲದೆ ಕೃಷಿ ಮೇಳದಲ್ಲಿ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮಳಿಗೆಗಳು, ಕೃಷಿ ಸಂಬಂಧಿ ವಿಶ್ವವಿದ್ಯಾನಿಲಯಗಳು / ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳ ಮಳಿಗೆಗಳು, ಕೃಷಿ ಇಂಜಿನಿಯರಿಂಗ್ ಮತ್ತು ಪಶುಸಂಗೋಪನೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ನೂತನ ತಂತ್ರಜ್ಞಾನಗಳನ್ನು ಕುರಿತಾದ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗುವುದು.

ಮಾಧ್ಯಮ ಗೋಷ್ಠಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎನ್. ದೇವಕುಮಾರ್, ಸಂಶೋಧನ ನಿರ್ದೇಶಕರಾದ ಡಾ. ವೈ.ಜಿ. ಷಡಾಕ್ಷರಿ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಾಮೀಣ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಕೇಂದ್ರ ಸಚಿವರ ಕರೆ

ಬೆಂಗಳೂರು, ನವೆಂಬರ್ 09 (ಕರ್ನಾಟಕ ವಾರ್ತೆ) :

ಗ್ರಾಮಗಳು ಉದ್ಧಾರವಾದರೆ ದೇಶ ಮುನ್ನೆಡೆದಂತೆ. ಕಸ ವಿಲೇವಾರಿ, ಶುದ್ಧ ಕುಡಿಯುವ ನೀರಿನ ಘಟದ ಸ್ಥಾಪನೆ, ಸೌರ ವಿದ್ಯುತ್ ಬಳಕೆ, ಗ್ರಂಥಾಲಯ ನಿರ್ಮಾಣ ಮುಂತಾದವುಗಳಿಂದ ಗ್ರಾಮಗಳ ಪುನರುಜ್ಜೀವನ ಸಾಧ್ಯ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕಪಿಲ್ ಮೊರೇಶ್ವರ್ ಪಾಟೀಲ್ ತಿಳಿಸಿದರು

ಅವರು ಇಂದು ವಿಕಾಸಸೌಧದಲ್ಲಿ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ರಾಜನಕುಂಟೆ ಹಾಗೂ ದೊಡ್ಡಜಾಲ ಪಂಚಾಯಿತಿಗಳಿಗೆ ಭೇಟಿ ನೀಡಿದ್ದಾಗಿ ತಿಳಿಸಿದರು. ಅಲ್ಲಿ ಅಮೃತ ಗ್ರಾಮ ಪಂಚಾಯತಿ ಯೋಜನೆ ಅಡಿ ಜನಜೀವನ್ ಮಿಷನ್, ನರೇಗಾ, ಸ್ವಚ್ಛ ಭಾರತ ಮುಂತಾದವುಗಳಿಗೆ ನೀಡಿರುವ ಅನುದಾನ ಹಾಗೂ ಪ್ರಗತಿ ಪರಿಶೀಲನೆ ನಡೆಸಿ, ಈ ಯೋಜನೆಯನ್ನು ಯಶಸ್ವಿಯಾಗಿ ನಡೆಸಿದ ಗ್ರಾಮಪಂಚಾಯಿತಿಗಳಿಗೆ 25 ಲಕ್ಷ ಅರ್ನಿಬಂಧಿತ ಅನುದಾನ ಸಹ ನೀಡಲಾಗುವುದೆಂದರು. ಗಾಮೀಣ ಯೋಜನೆಗಳನ್ನು ಮುನ್ನೆಡೆಸಿದರು ಮುಂಬರುವ ದಿನಗಳಲ್ಲಿ ಕರ್ನಾಟಕ ದೇಶಕ್ಕೆ ಮೊದಲನೇ ಸ್ಥಾನ ಗಳಿಸುವುದರಲ್ಲಿ ಸಂದೇಶವಿಲ್ಲ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ.ಎಸ್.ಈಶ್ವರಪ್ಪ, ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ನೀಡಿ ಘನತ್ಯಾಜ್ಯ ವಿಲೇವಾರಿ ಮಾಡುವ ತ್ರಿಚಕ್ರ ವಾಹನಗಳಿಗೆ ಮಹಿಳಾ ಸ್ವಸಹಾಯ ಸಂಘದ ಸದಸ್ಯರೇ ವಾಹನ ಚಾಲನೆ ಮಾಡಲು ಅವಕಾಶ ಕಲ್ಪಿಸಿ ಅವರಿಗೆ ಕೆಎಸ್‌ಆರ್‌ಟಿಸಿ ವತಿಯಿಂದ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಗ್ರಂಥಾಲಯ ಮೇಲ್ವಿಚಾರಕರ ಗೌರವ ಧನವನ್ನು 7 ಸಾವಿರದಿಂದ 10 ಸಾವಿರ ರೂಗಳಿಗೆ ಹೆಚ್ಚಿಸಲಾಗಿದೆ ಎಂದರು

ರಾಜ್ಯದಲ್ಲಿ ಅಮೃತ ಗ್ರಾಮ ಪಂಚಾಯತಿ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದೆ. ಅದರಲ್ಲಿ ಬೀದಿ ದೀಪಗಳ ಅಳವಡಿಕೆ, ಪ್ರತಿ ಮನೆಗೆ ಕುಡಿಯುವ ನೀರಿನ ನಳ ಸಂಪರ್ಕ, ಶೇ 100ರಷ್ಟು ಘನತ್ಯಾಜ್ಯ ವಿಂಗಡಣೆ, ವಿಲೇವಾರಿ, ತ್ಯಾಜ್ಯ ನೀರಿನ ವೈಜ್ಞಾನಿಕ ವಿಸರ್ಜನೆ, ಸೌರ ವಿದ್ಯುತ್ ಅಳವಡಿಕೆ, ಡಿಜಿಟಲ್ ಗ್ರಂಥಾಲಯದೊಂದಿಗೆ ಸುಸಜ್ಜಿತ ಶಾಲೆ ಸ್ಥಾಪನೆ, ಉದ್ಯಾನವನಗಳ ನಿರ್ಮಾಣ, ಶಾಲೆ, ಅಂಗನವಾಡಿಗಳಿಗೆ ಕುಡಿಯುವ ನೀರು ಶೌಚಾಲಯ, ಆಟದ ಮೈದಾನ ನಿರ್ಮಾಣ ಸೇರಿದೆ.

ಕೋವಿಡ್–19 ನಿರ್ವಹಣೆಗೆ ಗ್ರಾಮ ಪಮಚಾಯಿತಿ ಹಾಗೂ ಗ್ರಾಮಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗಿದ್ದು, ಯುವಕ ಯುವತಿ ಮಂಡಳಿಯ ವಾರಿಯರ್‌ಗಳನ್ನು ನೀಮಿಸಲಾಗಿತ್ತು. ಸರ್ಕಾರ ಪ್ರತಿ ಗ್ರಾಮ ಪಂಚಾಯಿತಿಗೆ ಒಮ್ಮೆ 20,000 ನಂತರ 50,000 ಅನುದಾನ ನೀಡಲಾಗಿತ್ತು, ರೋಗದ ಬಗ್ಗೆ ಜನರಿಗೆ ಅರಿವು ಮೂಡಿಸಿ, ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್‌ಗೆ ಸೇರಿಸುವಲ್ಲಿ ಪಂಚಾಯಿತಿಗಳು ಮುಖ್ಯ ಪಾತ್ರ ವಹಿಸಿತ್ತು. ನೂತನವಾಗಿ ಚುನಾಯಿತರಾದ 90,771 ಸದಸ್ಯರಿಗೆ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವತಿಯಿಂದ 285 ಕೇಂದ್ರಗಳಲ್ಲಿ 5 ದಿನಗಳ ತರಬೇತಿ ನೀಡಲಾಯಿತು,

ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಘನ ತ್ಯಾಜ್ಯ ಸಂಗ್ರಹಣೆ ವಿಲೇವಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ತರಬೇತಿ ಹಾಗೂ ವಾಹನಗಳನ್ನು ನೀಡಲಾಗಿದೆ. ಈ ಉದ್ದೇಶಕ್ಕಾಗಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM/SANJEEVINI) ಸಹಯೋಗ ಪಡೆಯಲಾಗಿದೆ.

ರಾಜ್ಯದ 5623 ಗ್ರಾಮೀಣ ಗ್ರಂಥಾಲಯಗಳನ್ನು ಮಾರ್ಚ್ 2019 ರಿಂದ ಗ್ರಾಮ ಪಂಚಾಯಿತಿಗಳ ವಶಕ್ಕೆ ನೀಡಲಾಗಿದೆ. ಪ್ರಸ್ತುತ 891 ಗ್ರಾಮ ಪಂಚಾಯತಿಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಪರಿವರ್ತಿಸಲಾಗಿದೆ. ಈ ಕಾರ್ಯಕ್ರಮದಲ್ಲಿ 10 ಲಕ್ಷ ಶಾಲಾ ಮಕ್ಕಳನ್ನು ಗ್ರಂಥಾಲಯಗಳಿಗೆ ಉಚಿತವಾಗಿ ನೋಂದಾಯಿಸಿ ಕಾರ್ಡ್ ನೀಡಲಾಗಿದೆ. ಗ್ರಾಮ ಮಟ್ಟದಲ್ಲಿ ಮಕ್ಕಳ ಶಿಕ್ಷಣ ಕಡ್ಡಾಯಗೊಳಿಸಲು ಕಾರ್ಯಪಡೆ ರಚಿಸಲಾಗಿದೆ. ಮಕ್ಕಳು ಶಾಲೆಯನ್ನು ತೊರೆಯದಂತೆ ನಿಗಾ ವಹಿಸಲಾಗಿದೆ. ಉದ್ಯೋಗಸ್ಥ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳಲು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಪ್ರತ್ಯೇಕ ಮಹಿಳಾ ವಿಶ್ರಾಂತಿ ಕೊಠಡಿ ಮತ್ತು ಶಿಶುಪಾಲನಾ ಕೇಂದ್ರ ತೆರೆಯಲಾಗಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ 3 ತಿಂಗಳಿಗೊಮ್ಮೆ ಕೆಡಿಪಿ ಸಭೆ ನಡೆಸಿ, ಗ್ರಾಮ ಮಟ್ಟದ ಯೋಜನೆಗಳ ಅನುಷ್ಠಾನಕ್ಕೆ ಸಹಕಾರಿಯಾಗಿದೆ

ಇದೇ ವೇಳೆಯಲ್ಲಿ ಕೇಂದ್ರ ಸಚಿವರು ಇಲಾಖೆಗೆ ಸಂಬಂಧಿಸಿದ ಲಿಂಕ್ ಡಾಕ್ಯುಮೆಂಟ್ ಹಾಗೂ ಇತರ ಕಿರುಹೊತ್ತಿಗೆಗಳನ್ನು ಬಿಡುಗಡೆಗೊಳಿಸಿದರು. ಸಾಧನೆಗೈದ ಕ್ರೀಡಾ ಪಟುಗಳನ್ನು ಸನ್ಮಾನಿಸಿದರು. ಸ್ವಸಹಾಯ ಗುಂಪಿನ ಮಹಿಳೆರು ತಮ್ಮ ಪಂಚಾಯಿತಿಗಳ ಅನುಭವ ಹಂಚಿಕೊಂಡರು. ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್, ಆಯುಕ್ತೆ ಶಿಲ್ಪಾ ನಾಗ್, ವಿಶೇಷಾಧಿಕಾರಿ ಜಯರಾಮ್, ಎನ್‌ಆರ್ ಎಲ್ ಎಂ ಮಿಷನ್ ನಿರ್ದೇಶಕಿ ಮಂಜುಶ್ರೀ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದಿಂದ

## ಸಾಲಸೌಲಭ್ಯ ಪಡೆಯಲು ಆನ್–ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನ

**ಬೆಂಗಳೂರು, ನವೆಂಬರ್ 09, (ಕರ್ನಾಟಕ ವಾರ್ತೆ) :**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮವು ರಾಜ್ಯದ ಮತೀಯ ಅಲ್ಪಸಂಖ್ಯಾತರಾದ ಮುಸಲ್ಮಾನರು, ಕ್ರೈಸ್ತರು, ಜೈನರು, ಭೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕಾಭಿವೃದ್ದಿಗಾಗಿ ಅನುಷ್ಠಾನಗೊಳಿಸುತ್ತಿರುವ ರಾಜ್ಯ ಸರ್ಕಾರ ಪ್ರಾಯೋಜಿತ ಅರಿವು (ವಿಧ್ಯಾಬ್ಯಾಸ ಸಾಲ) ಯೋಜನೆಯಡಿ 2021–22 ನೇ ಸಾಲಿನಲ್ಲಿ ಸಾಲಸೌಲಭ್ಯ ಪಡೆಯಲು ಆನ್–ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಿದೆ .

2021–22ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ/ನೀಟ್ ನಲ್ಲಿ ಆಯ್ಕೆಯಾಗುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆ ಯಡಿಯಲ್ಲಿ ಸಾಲ ಪಡೆಯಲು ಅಪೇಕ್ಷಿಸುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ನಿಗಮದ ವೆಬ್ ಸೈಟ್ kmdconline.karnataka.gov.in ಮುಖಾಂತರ ಅರ್ಜಿ ಸಲ್ಲಿಸ ಬಹುದಾಗಿರುತ್ತದೆ.

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ :05/11/2021 ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಅದರ ಹಾರ್ಡ್ ಕಾಪಿ (Hard Copy)ಯನ್ನು ಡೌನ್‌ಲೋಡ್ ಮಾಡಿಕೊಂಡು ಅಗತ್ಯ ದಾಖಲಾತಿಗಳೊಂದಿಗೆ ಇಟಿ/ನೀಟ್ ಪರೀಕ್ಷಾ ಪ್ರವೇಶ ಪ್ರತಿ / ಸಿಇಟಿ ಆರ್ಡರ್(Order Copy) ಪ್ರತಿಗಳನ್ನು ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ನೀಡಬೇಕು ಎಂದು ಜಿಲ್ಲಾ ವ್ಯವಸ್ಥಾಪಕರು, ಕ.ಅ.ಅ.ನಿ. ಬೆಂಗಳೂರು ನಗರ ಜಿಲ್ಲೆ ಉತ್ತರ ವಿಭಾಗ ಇವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರ ಪ್ರವಾಸ**

**ಬೆಂಗಳೂರು, ನವೆಂಬರ್ 09, (ಕರ್ನಾಟಕ ವಾರ್ತೆ) :**

ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಎನ್. ನಾಗರಾಜು (ಎಂ.ಟಿ.ಬಿ), ಅವರು ನವೆಂಬರ್ 10 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ವಾಪಸ್ಸಾಗಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಕನ್ನಡ ರಂಗಭೂಮಿಯೇ ಮೂಲದ್ರವ್ಯ - ಪ್ರಕಾಶ್ ಬೆಳವಾಡಿ ಅಭಿಮತ**

**ಬೆಂಗಳೂರು, ನವೆಂಬರ್ 09, (ಕರ್ನಾಟಕ ವಾರ್ತೆ) :**

ಕನ್ನಡ ನಾಟಕಗಳು ಹಾಗು ಕನ್ನಡ ಇಂಗ್ಲೀಷ್, ಹಿಂದಿ, ತೆಲುಗು, ತಮಿಳು, ಮರಾಠಿ ಹೀಗೆ ಬಹುಭಾಷೆಯ ಸಿನಿಮಾಗಳಲ್ಲಿ ನಟನೆ, ಕನ್ನಡ ಇಂಗ್ಲೀಷ್ ನಾಟಕಗಳ ನಿರ್ದೇಶನ, ಸೀರಿಯಲ್ ವೆಬ್ ಸೀರೀಸ್ ಮುಂತಾದವುಗಳ ನೈಪುಣ್ಯತೆಗೆ ಕನ್ನಡ ರಂಗಭೂಮಿಯೇ ಮೂಲದ್ರವ್ಯವೆಂದು ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರಕಾಶ್ ಬೆಳವಾಡಿ ಅಭಿಪ್ರಾಯ ಪಟ್ಟಿದ್ದಾರೆ.

ಮೇಕಪ್ ನಾಣಿ, ಭಾರ್ಗವಿ ನಾರಾಯಣ್ ಅಂತಹ ಕಲಾ ಕುಟುಂಬದ ರಂಗ ಪರಿಸರದಲ್ಲಿ ಬೆಳೆದರೂ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದುತ್ತಲೇ ಹಲವಾರು ಸಾಧ್ಯತೆಗಳ ಕಡೆ ಮನ ಸೆಳೆಯುತ್ತಿತ್ತು. ಬರೆಯುವ ಹಂಬಲ ತುಂಬಾ ಇದ್ದುದರಿಂದ ಆಗಿನ ರಂಗಖ್ಯಾತರು ಪತ್ರಕರ್ತರು ಆಗಿದ್ದ ಬಿ.ವಿ.ವೈಕುಂಠರಾಜು, ಪಿ.ಲಂಕೇಶ್ ಅವರೂ ನನಗೆ ಪತ್ರಕೆಗಳ ಬರಹಕ್ಕೆ ಅವಕಾಶ ನೀಡದಿದ್ದಾಗ ಛಲದಿಂದ ಜರ್ನಲಿಸಂ ಓದಿ ಇಂಗ್ಲೀಷ್ ಪತ್ರಿಕೆಗಳ ವರದಿಗಾರ, ವಿಶೇಷ ವರದಿಗಾರನಾದೆ. ಆಗಿನ ಕೇಂದ್ರ ಸರ್ಕಾರದ ಪ್ರಸಾರ ಖಾತೆಯ ಸಚಿವೆ ಸುಷ್ಮಾ ಸ್ವರಾಜ್ ಅವರೇ ಆಸಕ್ತಿಯಿಂದ ನನ್ನನ್ನು ಕರೆದು ಸಂದರ್ಶನ ನೀಡಿದ್ದರು. ದೊಡ್ಡ ಪತ್ರಿಕೆ ಎರಡು ಸಂಪೂರ್ಣ ಪುಟಗಳ ಸಂದರ್ಶನ ಬರೆದು ಕೊಟ್ಟಾಗಲೂ ಸಂಪಾದಕರು ಪ್ರಕಟಿಸಲಿಲ್ಲ. ಎರಡು ವಾರ ನಾನು ಮುನಿಸಿಕೊಂಡು ಕೆಲಸಕ್ಕೆ ಹೋಗಿರಲಿಲ್ಲ. ನಂತರ ಸಂಪಾದಕರು ಕರೆದು ಕೆಲಸ ಕೊಟ್ಟಿದ್ದಲ್ಲದೇ ಆ ಎರಡೂ ಪುಟಗಳ ದೀರ್ಘ ಸಂದರ್ಶನ ಪ್ರಕಟ ಮಾಡಿದ್ದು ಅಲ್ಲದೇ ಕೇಂದ್ರ ಸಚಿವರು ಪ್ರಸಾರಭಾರತಿಯಲ್ಲಿನ ಬದಲಾವಣೆಗಳಿಗೆ ಯತ್ನಿಸಿದಾಗ ನನ್ನ ಪತ್ರಿಕಾ ಪ್ರಶ್ನೆಗಳನ್ನು ಮೆಚ್ಚಿ ಪೂರ್ಣ ಸಂದರ್ಶನ ನೀಡಿದ್ದು ಆಗಿನ ನನ್ನ ಸ್ಪೂರ್ತಿಯ ಕ್ಷಣಗಳು ಎಂದು ಅವರು ನೆನಪಿಸಿಕೊಂಡರು.

ಎರಡು ಮೂರು ವರ್ಷದ ಮಗುವಾಗಿದ್ದಾಗಿನಿಂದಲೂ ರಂಗಭೂಮಿಯ ನಿಕಟ ವಾತಾವರಣ, ಮನೆಯಲ್ಲೆ ರಿಹರ್ಸಲ್, ಅತ್ಯುತ್ತಮ ಜ್ಞಾಪಕ ಶಕ್ತಿ ಉತ್ತಮ ನಿಲುವು ಇದ್ದಾಗಲೂ ನನಗೆ ಕನ್ನಡ ರಂಗಭೂಮಿ ಸೂಕ್ತ ಅವಕಾಶ ನೀಡಲಿಲ್ಲ. ನಾಟಕಗಳಿಗೆ ಲೈಟಿಂಗ್ ನನ್ನ ಹವ್ಯಾಸವಿದ್ದರೂ ಅವಕಾಶ ಸಿಗಲಿಲ್ಲ, ಒಮ್ಮೆ ಇಂಗ್ಲೀಷ್ ನಿರ್ದೇಶಕರೊಬ್ಬರು ಕಾರ್ನಾಡರ ಅಗ್ನಿ ಮತ್ತು ಮಳೆ

ನಾಟಕ ನಿರ್ದೇಶಿಸುತ್ತಿರುವಾಗ ಅಕಸ್ಮಾತ್ ನಾನಿತ್ತ ವಿವರಣೆ ಅವರಿಗೆ ಇಷ್ಟವಾಗಿ ಇಂಗ್ಲೀಷ್ ರಂಗಭೂಮಿ ತೆರೆಯಿತು. ಬೆಂಗ್ಳೂರು ಲಿಟ್ಲ್ ಥಿಯೇಟರ್ ಮೂಲಕ ಹಲವಾರು ಇಂಗ್ಲೀಷ್ ನಾಟಕಗಳ ಪ್ರದರ್ಶನ ಆಯಿತು ಅಲ್ಲದೇ ನಾನೇ ಬರೆದು ನಿರ್ದೇಶಿಸಿದ “ಸ್ಟಂಬಲ್ “ ಇಂಗ್ಲೀಷ್ ಚಿತ್ರ ರಾಷ್ಟ್ರೀಯ ಪ್ರಶಸ್ತಿ ಪಡೆಯಿತು ಎಂದರು.

ಪ್ರಕಾಶ್ ಬೆಳವಾಡಿ ಅವರನ್ನು ಅನುನಯದಿಂದ ಕಾಣುತ್ತಿದ್ದ ಸಂವಾದಕ ಅಭಿರುಚಿ ಚಂದ್ರು ಅವರ ಪ್ರಶ್ನೆಗೆ ಬೆಳವಾಡಿ ನಾನು ಮೋದಿ ಅಭಿಮಾನಿ ಹೌದು, ಅವರಲ್ಲಿನ ದೇಶದ ಬಗೆಗಿನ ಕಾಳಜಿ, ತುಡಿತ, ಪ್ರಯತ್ನ, ಎಂದೂ ಜಾತಿವಾದ ಬಗ್ಗೆ ಮಾತನಾಡದ ಅವರ ನಡೆ ಇಷ್ಟ 1970-80ರ ದಶಕದಲ್ಲಿ ಕರ್ನಾಟಕ ರಂಭೂಮಿಯಲ್ಲೂ ಬಹಳಷ್ಟು ಪರಿವರ್ತನೆಗಳಾದವು. ಜೊತೆಗೆ ಸಾಹಿತ್ಯ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳೂ ನಡೆದವು. ಇಡೀ ದೇಶದಲ್ಲಿಯೇ ಬದಲಾವಣೆ ನಡೆಯಿತು ಆಗಲೂ ಬೆಂಗಳೂರು ಬದಲಾವಣೆಯ ಕೇಂದ್ರವಾಗಿತ್ತು. ಇಂದೂ ಮಹತ್ತರ ಬದಲಾವಣೆಗಲಾಗುತ್ತಿವೆ ಅದಕ್ಕೂ ಬೆಂಗಳೂರು ಮುಖ್ಯಸ್ಥಾನದಲ್ಲಿದೆ ಎಂದ ಅವರು ನಾನು ಯಾವುದೇ ಪಕ್ಷ, ಮತ, ಸಿದ್ದಾಂತಗಳ ಅನುಯಾಯಿ ಅಲ್ಲ. ನೇರ ನಿಷ್ಠೂರ ನಡೆ ನನ್ನದು ಎಂದರು.

ಪ್ರೇಕ್ಷಕರ ಪ್ರಶ್ನೆಯೊಂದು ಇತ್ತೀಚಿನ “ಪರ್ವ” ನಾಟಕದ ಕುರಿತಾಗಿ ಬಂದಾಗ ಅದೇ ಉತ್ಸಾಹದಿಂದ ಮಾತನಾಡಿದ ಅವರು ಆ ನಾಟಕ ಕೇವಲ ಮಹಾಭಾರತದ ಪ್ರಸಂಗ ಮಾತ್ರವಲ್ಲ ಎಲ್ಲಾ ಪಾತ್ರಗಳೂ ಅಧಿಕಾರದ, ದರ್ಪದ ವಿರೋಧಿಯಾಗಿ ವರ್ತಿಸುತ್ತದೆ. ಎಸ್.ಎಲ್.ಭೈರಪ್ಪನವರು ಪರ್ವದಲ್ಲಿ ತಣ್ಣನೆಯ ಕ್ರೌರ್ಯವನ್ನು ಅಧಿಕಾರಿಶಾಹಿಯನ್ನು ಪ್ರತಿರೋಧಿಸುವುದನ್ನೇ ಪ್ರತಿಪಾದಿಸಿದ್ದಾರೆಂದರು. ಮತ್ತೋಬ್ಬರ ಪ್ರಶ್ನೆಗೆ ಉತ್ತರಿಸುತ್ತ, ನಾನು ನಾಟಕಗಳ ಮರುಪ್ರದರ್ಶನಗಳನ್ನು ನೋಡುವುದಿಲ್ಲ ಏಕೆಂದರೆ ಪ್ರಥಮ ಪ್ರದರ್ಶನದಲ್ಲಿರುವ ತನ್ಮಯತೆ ಮರು ಪ್ರದರ್ಶನಗಳಲ್ಲಿ ಕಡಿಮೆಯಾಗುತ್ತಾ ಹೋಗುವುದನ್ನು ನಾನು ಇಚ್ಛಿಸುವುದಿಲ್ಲವೆಂದರು.

ಅನುಭವಗಳ ಆತ್ಮೀಯ ಅನಾವರಣದ ಭಾಗವಾಗಿ ”ರಂಗಚಾವಡಿ” ಯಲ್ಲಿ ಕರ್ನಾಟಕ ನಾಟಕ ಅಕಾಡೆಮಿ ನನ್ನನ್ನು ಅಭಿನಂದಿಸುವುದಕ್ಕೆ ಸಂತಸವೆಂದರು.

ನಾಟಕ ಅಕಾಡೆಮಿಯ ಈ ರಂಗಚಾವಡಿ ದಿನಾಂಕ 07 ರಂದು ನಯನ ಸಭಾಂಗಣದಲ್ಲಿ ನಡೆದು ಪ್ರಕಾಶ್ ಬೆಳವಾಡಿಯವರ ಬಾಲ್ಯ, ಬೆಳವಣಿಗೆ, ರಂಗ ಸಿನಿಮಾ ಇತ್ಯಾದಿ ಮುಖಗಳನ್ನು ನಮ್ಮ ಅನುನಯದ ಪ್ರಶ್ನೆಗಳಿಂದ ಕೆಣಕುತ್ತಾ ಹೊರತೆಗೆದ್ದು ಮತ್ತೊರ್ವ ರಂಗಕರ್ಮಿ ಅಭಿರುಚಿ ಚಂದ್ರು ಅವರು.

ಸಂವಾದ ಆರಂಭದಲ್ಲಿ ರಾಜಗುರು-ನಯನ ಅವರ ರಂಗಪಯಣ ತಂಡ ಉತ್ತಮ ರಂಗಸಂಗೀತ ಕಾರ್ಯಕ್ರಮ ನೀಡಿತು.

ಅಕಾಡೆಮಿ ಸದಸ್ಯೆಯಾದ ಶ್ರೀಮತಿ ಪ್ರೇಮಾ ಬದಾಮಿ ಸ್ವಾಗತಿಸಿದರು, ಅಧ್ಯಕ್ಷರಾದ ಪ್ರೊ ಭೀಮಸೇನ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಕಾಡೆಮಿ ಸದಸ್ಯರಾದ ಪ್ರವೀಣ್ ರಾಥೋಡ್ ವಂದಿಸಿದರು.

ರಂಗಕರ್ಮಿಗಳಾದ ಸೇತುರಾಮ, ಶ್ರೀಪತಿ ಮಂಜನಬೈಲು, ನಾ ದಾ ಶೆಟ್ಟಿ, ಡಾ|| ಬಿ.ವಿ.ರಾಜಾರಾಂ ದಂಪತಿ, ಡಾ|| ಹೆಲನ್, ಮಾ ನಾಗರಾಜ, ಎಲ್ ಎಂ ವಿಶ್ವೇಶ್ವರ ದಂಪತಿ ಸೇರಿದಂತೆ ಹಲವಾರು ಯುವ ಉತ್ಸಾಹಿ ತರುಣರು, ಬೆಳವಾಡಿ, ಪರ್ವಗಳ ಅಭಿಮಾನಿಗಳೂ ಉತ್ಸಾಹದಿಂದ ನೆರೆದಿದ್ದು ರಂಗಚಾವಡಿಯು ಕಳೆಕಟ್ಟಿತು.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೀಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ**

ಬೆಂಗಳೂರು, ನವೆಂಬರ್ 09 (ಕರ್ನಾಟಕ ವಾರ್ತೆ) :

**ದಿನಾಂಕ: 9.11.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 150 | ಸಾಧಾರಣ | $PM_{2.5}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 182 | ಸಾಧಾರಣ | $PM_{2.5}$ |
| 3 | ಕವಿಕ, ಮೈಸೂರುರಸ್ತೆ | 207 | ಕಳಪೆ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 104 | ಸಾಧಾರಣ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 98 | ತೃಪ್ತಿಕರ | $PM_{10}$ & $PM_{2.5}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 89 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 41 | ಉತ್ತಮ | $PM_{10}$ |
| **(9.11.2021 at 10.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 79 | ತೃಪ್ತಿಕರ | $PM_{10}$ |
| 9 | ಪೀಣ್ಯ | 71 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು |
|---|---|
| ಉತ್ತಮ (0–50) | ಕನಿಷ್ಠ ಪರಿಣಾಮ |
| ತೃಪ್ತಿಕರ (51–100) | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| ಸಾಧಾರಣ (101–200) | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| ಕಳಪೆ (201–300) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| ಅತಿ ಕಳಪೆ (301–400) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| ತೀವ್ರ (>401) | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Bengaluru, November 9 (Karnataka State News)**

**Date : 9.11.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 150 | Moderate | $PM_{2.5}$ |
| 2 | Jayanagar 5th Block, Shalini ground | 182 | Moderate | $PM_{2.5}$ |
| 3 | KAVIKA, Mysore Road | 207 | Poor | $PM_{2.5}$ |
| 4 | Rajeev Gandhi Institute of Chest Disease, NIMHANS, Hombegowda Nagar | 104 | Moderate | $PM_{10}$ |
| 5 | HSR Layout, near Central Silkboard | 98 | Satisfactory | $PM_{10}$ & $PM_{2.5}$ |
| 6 | City Railway Station, Magestic, Bengaluru | 89 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 41 | Good | $PM_{10}$ |
| **(9.11.2021 at 10.05 AM)** | | | | |
| 8 | BWSSB, Kadabesanahalli | 79 | Satisfactory | $PM_{10}$ |
| 9 | Peenya | 71 | Satisfactory | $PM_{10}$ |
| 10 | BTM Layout | * | * | * |